ದಿನಾಂಕ: 23-01-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟಿಸವಾಲು: ಶ್ರೀ ಎ ನಾಗಪ್ಪ ವಕೀಲರಿಂದ:-**

6. ನನ್ನ ಅಜ್ಜನಿಗೆ ನನ್ನ ತಂದೆಯ ಹಿರಿಯ ಮಗ ಆತನೇ ಮನೆತನವನ್ನು ನೋಡಿಕೊಂಡು ಹೋಗುತ್ತಿದ್ದ ಎಂದರೆ ಸರಿಯಲ್ಲ. ನನ್ನ ತಂದೆಯೇ ಮನೆನತನದ ಹಿರಿತನವನ್ನು ಮಡಿಕೊಂಡು ಹೋಗುತ್ತಿದ್ದ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ಓದಿದ್ದಾನೆ. ನನ್ನ ತಂದೆ ವಿದ್ಯಾಭ್ಯಾಸ ಮಾಡಿರಲಿಲ್ಲ ಆದ್ದರಿಂದ ನಮ್ಮ ಚಿಕ್ಕಪ್ಪ ಮನೆನತನ ಹಿರಿತನವನ್ನು ಮಾಡುತ್ತಿದ್ದ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಹೆಂಡತಿ ಮತ್ತು ನನ್ನ ತಾಯಿ ಖಾಸ ಅಕ್ಕತಂಗಿಯರು ಎಂದರೆ ಸರಿ. ನನ್ನ ತಾಯಿ ತವರು ಮನೆ ಆನಾನೆಹೊಸೂರು ಎಂದರೆ ಸರಿ. ನನ್ನ ತಾಯಿಗೆ 4 ಜನ ಅಕ್ಕತಂಗಿಯುರು 3 ಜನ ಸಹೋದರರು ಇರುತ್ತಾರೆ. ಸ ನಂ 17 ಹಿಸ್ಸಾ 2 ನನ್ನ ತಾಯಿಗೆ ತವರುಮನೆಯಿಂದ ಖರೀದಿ ಮಾಡಿಕೊಟ್ಟಿರುತ್ತಾರೆ ಅದೇ ರೀತಿ ನನ್ನ ತಾಯಿಯ ಉಳಿದ ಸಹೋದರಿಯರಿಗೆ ಬಂಗಾರ ಕೊಟ್ಟಿರುತ್ತಾರೆ. ಸ ನಂ 17/2 ಆಸ್ತಿಯನ್ನು ತವರು ಮನೆಯಿಂದ ಹಣ ತಂದು ಖರೀದಿಸಿಲ್ಲ ಒಟ್ಟು ಕುಟುಂಬದ ಆಸ್ತಿಯ ಆದಾಯದಿಂದ ಖರೀದಿಸಿದ್ದಾರೆಂದರೆ ಸರಿಯಲ್ಲ. ಖರೀದಿ ಪತ್ರದಲ್ಲಿ ತವರು ಮನೆಯಿಂದ ಹಣ ತಂದ ವಿಷಯ ಬರೆದಿದ್ದಾರೋ ಇಲ್ಲವೋ ನೆನಪಿಲ್ಲ. ಬಸನಗೌಡ ಮಾಲಿಪಾಟೀಲ್ ನಮ್ಮೂರಿನವರು ಎಂದರೆ ಸರಿ. 2001 ರಲ್ಲಿ ಬುದ್ದಿವಂತರಾದ ಬಸನಗೌಡ ಮಾಲಿಪಾಟೀಲ್, ಕೃಷ್ಣಪ್ಪ, ಶಿವಪ್ಪ ಇವರ ಸಮಕ್ಷಮದಲ್ಲಿ ವಿಭಾಗ ಆಯಿತು ಎಂದರೆ ಸರಿಯಲ್ಲ. 2001 ರಲ್ಲಿ ವಿಭಾಗ ಮಾಡಿಕೊಂಡ ಪ್ರಕಾರ ಲಿಖಿತ ಹೇಳಿಕೆಯಲ್ಲಿನ ಪ್ಯಾರಾ ನಂಬರ್ 3 ರಲ್ಲಿನ ಆಸ್ತಿಗಳು ನನ್ನ ತಂದೆ ಪಾಲು ಬಂದವು ಎಂದರೆ ಸರಿಯಲ್ಲ. ಲಿಖಿತ ಹೇಳಿಕೆ ಪ್ಯಾರಾ ನಂ 3 ಮತ್ತು 4 ರಲ್ಲಿ ಹೇಳಿದ ಪ್ರಕಾರ ಪ್ರತಿವಾದಿ 1 ರವರಿಗೆ ಆಸ್ತಿ ಬಂತು ಎಂದರೆ ಸರಿಯಲ್ಲ. ವಿಭಾಗದ ರೀತಿ ಪಹಣಿಗಳು ವರ್ಗಾವಣೆಯಾಗಿವೆ ಎಂದರೆ ಸರಿಯಲ್ಲ.

7. ನಾನು ಪಿ ಯು ಸಿ ವರೆಗೆ ವಿದ್ಯಾಬ್ಯಾಸ ಮಾಡಿದ್ದೇನೆ. ಪಹಣಿಯಲ್ಲಿ ವರ್ಗಾವಣೆಯಾದ ರೀತಿಯಲ್ಲಿ ನಾವು ಮತ್ತು ನಮ್ಮ ಚಿಕ್ಕಪ್ಪ ಸ್ವಾಧೀನದಲ್ಲಿದ್ದೇವೆಂದರೆ ಸರಿಯಲ್ಲ. 25-04-2006 ರಲ್ಲಿ 1 ನೇ ಪ್ರತಿವಾದಿ ತನ್ನ ಸ್ವಂತ ದುಡಿಮೆಯಿಂದ ಸ ನಂ 593/710, ಮುದಗಲ್ ಸೀಮಾದ 04-00 ಎಕರೆ ಜಮೀನು 4 ನೇ ಪ್ರತಿವಾದಿಯ ಹೆಸರಿಗೆ ಖರೀದಿಸಿದ್ದಾರೆಂದರೆ ಸರಿಯಲ್ಲ. ಖರೀದಿಯಾದ ಮೇಲೆ 4 ನೇ ಪ್ರತಿವಾದಿಯ ಹೆಸರಿಗೆ ಪಹಣಿ ಇದೆ ಎಂದರೆ ಸರಿ. ಸದರಿ ಜಮೀನು ಅವರ ಸ್ವಾಧೀನ ಅನುಭವದಲ್ಲಿದೆ ಎಂದರೆ ಸರಿಯಲ್ಲ. ಅದೇ ರೀತಿ 1 ನೇ ಪ್ರತಿವಾದಿತನ್ನ ಸ್ವಂತ ದುಡಿಮೆಯಿಂದ ಸ ನಂ 53/1 ಹಿಸ್ಸಾ 1 ನ್ನು ರೂಪಾಯಿ 1 ಲಕ್ಷ ಎಪ್ಪತ್ತೈದು ಸಾವಿರಕ್ಕೆ ಖರೀದಿಸಿದ್ದಾನೆಂದರೆ ಸರಿಯಲ್ಲ. ಖರೀದಿಯಾದ ಮೇಲೆ ಸಣ್ಣ ಹನುಮಂತಪ್ಪನ ಹೆಸರಲೇ ವರ್ಗಾವಣೆಯಾಗಿದೆ ಎಂದರೆ ಸರಿ. ಅದೇ ರೀತಿ ಐ ಟಂ ನಂಬರ್ 5, 6, 11, 12, ಇವು 1 ಮತ್ತು 4 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಈಗಾಗಲೇ ವಿಭಾಗ ಆಗಿದ್ದರೂ ಕೂಡಾ ಪ್ರತಿವಾದಿ 1 ಮತ್ತು 4 ರವರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

**( ಚಂದ್ರಶೇಖರ ಪಿ. ದಿಡ್ಡಿ )**

ಹಿರಿಯ ಸಿವಿಲ್ ನ್ಯಾಯಾಧೀಶರು,

**ಲಿಂಗಸೂಗುರು.**